
ಕೇಳಿದ್ದಕ್ಕೆ ಹಯವದನ 'ಅದೇ, ಈಗ ವಿಗ್ರಹ, ನೆಕ್ಸ್ಟ್ ಇಲ್ಲೇ ಇದ್ದು ಪ್ರಾಣಿಗಳ ಮೇಲೆ ಎಕ್ಸ್‌ಪರಿಮೆಂಟ್ ಮಾಡ್ತಾರೆ... ಮೊನ್ನೆ ಒಂದು ಕಲ್ಲಿನ ಆನೆ ಬಂದಿತ್ತು, ಎಲ್ಲೋ ದುರ್ಗಾ ಕಾಡಿನಲ್ಲಿ ಸಿಕ್ಕಿದ್ದಂತೆ, ಹನ್ನೆರಡನೆಯ ಶತಮಾನದ್ದು, ಈ ಜೀವಿಗಳು ಎಂಥಾ ಮಾಡಿದ್ದಾರೆ ಗೊತ್ತುಂಟಾ, ಆ ಗಜಮುಖವನ್ನ ಆಲ್ಟರ್ ಮಾಡಿ ಚಿರತೆ ಮತ್ತೆ ಕತ್ತೆಕಿರುಬನ ಮುಖ ಹಾಕಿಟ್ಟಿದ್ದಾರೆ ಮಾರ್ರೇ... ಅದೇ ಸ್ಕಲ್ಪ್ಚರ್‌ನ್ನ ಮತ್ತೆ ನೋಡಿದ್ರೆ, ಮಹಾರಾಷ್ಟ್ರದ ಯುನಿವರ್ಸಿಟಿಯಲ್ಲಿ ನಮ್ಮ ಉಪಾಧ್ಯಕ್ಷರೇ ಅನಾವರಣ ಮಾಡಿದ್ದಾರೆ. ಮೊನ್ನೆ ಪೇಪರ್ ಅಲ್ಲಿ ಬಂದಿತ್ತು...' ಎಂದ ಹಯವದನ ರಾವ್, ಜಗತ್ತಿನ ಕಾರುಬಾರುಗಳಿಂದ ದೂರವಿರುವ ಈ ಹಾಳುಬಿದ್ದಿರುವ ಊರಿನಲ್ಲಿ ಪರ್ವತನೇನಿ ಅಂಡ್ ಕೋ ಇವರ ಆವಿಷ್ಕಾರಗಳು ಇನ್ನು ಮುಂದೆ ಯಾವ ಎಗ್ಗಿಲ್ಲದೆ ಸಾಗುವ ವಿಚಿತ್ರ ಘಟನಾವಳಿಗಳನ್ನು ವಿವರಿಸುತ್ತಾ, 'ಈಗ ಶಿಲೆಗಳು, ನಂತರ ಪ್ರಾಣಿಗಳು ಆಮೇಲೆ ನರ ಮನುಷ್ಯರ ಮೇಲೆ ಇವ್ರ ಆಲ್ಟ್ರೇಷನ್ ಪ್ರಯೋಗ ನಡೆಯುತ್ತೆ ಮಾರಾಯ್ರೇ... ಸದ್ಯ ಅಷ್ಟು ವರುಷ ಬದುಕಿರಲ್ಲ ನಾನು! ನನ್ನ ಈ ಜನ ಹುಚ್ಚ ಮುದುಕ ಅಂತ ನಂಬಿ ಬಿಟ್ಟಿದ್ದಾರೆ, ಹಾಗೇ ಜೀವದಿಂದ ಇದ್ದೇನೆ ನೋಡಿ. ಕಡೆಗೆ ನನ್ನ 10 ವರ್ಷದ ಮೊಮ್ಮಗನಿಗೆ ನಾನು ಈ ಕಥೆ ಹೇಳಿದ್ರೆ ಅವನೂ 'ತಾತ ಮೆಂಟಲ್, ನೀನು ಬೆಳಿಗ್ಗೆ ಎದ್ದು ಯೋಗ ಮಾಡು, ಜಪ ಮಂತ್ರ ಹೇಳು ಸರಿ ಆಗ್ತೀರಿ' ಅಂತಾನೆ. ನನ್ನ ಮಗಳು 'ನನ್ನ ಮಗನಿಂದ ದೂರ ಇರು ಅಪ್ಪಾ' ಅಂತ ಮನೆಯಿಂದ್ಲೇ ಆಚೆ ಕಳುಹಿಸಿದ್ದಾಳೆ... ಈಗ ನನ್ನೆ ಆ ಜೀವಿಗಳನ್ನ ಗುಟ್ಟಾಗಿ ಅಬ್ಸರ್ವ್ ಮಾಡೋದೇ ಕಾಯಕ...' ಅಂದ ಮತ್ತೆ ನಾಲಗೆಯಲ್ಲಿ ತುಟಿಯ ಕೋನಗಳನ್ನು ಸವರಿಕೊಳ್ಳುತ್ತಾ.

'ನಿಮ್ಮ ಕಣ್ಣಿಗೆ ಈ ಆಲ್ಟರ್ ರಿಸ್ಟೋರೇಷನ್ ಮಾಡೋ ಕ್ರೀಚರ್ಸ್ ಏನೋ ಅಂದ್ರಲ್ಲ ನೀವು... ಹ್ಞಾ ಜೀವಿಗಳು, ಅವು ಕಂಡಿದ್ದಾವ...' ಅಂದೆ ಕುತೂಹಲದಿಂದ.

'ನಕ್ಷತ್ರಗಳು ಉದುರಿ ಬೀಳುತ್ತಲ್ಲ.. ಎಷ್ಟು ಜನ ನೋಡಿದ್ದಾರೆ...? ಕಾಯ್ತಾ ಕೂತ್ರೆ ಎಲ್ಲೋ ಒಮ್ಮೆ ರಾತ್ರಿ ಪಟ್ಟ ಕಂಡು ಹಾಗೇ ಕಣ್ಮರೆ ಆಗಲ್ವಾ... ಹಾಗೇ... ಇದೂನು ಆಕ್ಸಿಡೆಂಟಲಿ ನಿಮ್ಮ ಕಣ್ಣಿಗೆ ಬೀಳ್ಬಹುದು. ಆದ್ರೆ ಅದಕ್ಕೂ ಅದೃಷ್ಟ ಬೇಕು ಇವ್ರೇ... ಆದ್ರೆ ನನ್ನಂತಹ ಒಂಟಿ ಜೀವಕ್ಕೆ ಹೀಗೆ ಈ ಜೀವಿಗಳನ್ನ ಕದ್ದು ಕಾಯೋ ಆಟ ಭಾರಿ ಮಜ...' ಎಂದ.



ಮತ್ತೆ, ಆ ರಾತ್ರಿ ಬಸ್ಸಿನಲ್ಲಿ ವಾಪಸ್ಸು ಮಂಗಳೂರಿಗೆ ಬರುತ್ತಾ ಇರುವಾಗ ಹಿಂದಿನ ಸೀಟಿನಲ್ಲಿ ಕೂತು ಈ ಎಡಿಟರ್ ಶಾಸ್ತ್ರಿ, 'ಪರ್ವತನೇನಿಯ ಪ್ರಾಜೆಕ್ಟ್ ಬಗ್ಗೆ ನ್ಯೂಸ್ ಸ್ಟೋರಿ ತಾರಪ್ಪ ಅಂದ್ರೆ, ಈ ಉತ್ಪ್ರೇಕ್ಷೆಯ ಕಥೆ ರಿಪೋರ್ಟ್ ಮಾಡ್ತೀಯ' ಅಂತ ಉಗಿಯೋದು ಖಾತ್ರಿ ಎನಿಸಿ, ಈ ಅಲೌಕಿಕ ಸುದ್ದಿಯನ್ನು ಒಪ್ಪಿಸಿ ಅವಮಾನಕ್ಕೆ ಒಳಗಾಗುವುದಕ್ಕಿಂತ, ಕೊನೆಯ ಪೇಜಲ್ಲಿ ಇದೇ ಥೀಮ್ ಇಟ್ಟು ಪಲ್ಪ್ ಹಾರರ್ ಧಾರಾವಾಹಿ ಶುರುಮಾಡಿದರೆ ಈ 'ಕ್ರೈಂ ಆಂಡ್ ಸ್ಮೈಲ್'ವಾರ ಪತ್ರಿಕೆಯ ಕೊಳ್ಳೋ ಜನ ಕಣ್ಣು ಹಾಯಿಸಬಹುದೇನೋ ಅಂತ ಲೆಕ್ಕ ಹಾಕಿದೆ.

●